**GANGARAM BADERIYA**, I.A.S.
Secretary to Government (PR)
Rural Development and
Panchayat Raj Department

GOVERNMENT OF KARNATAKA

Karnataka Government Secretariat
3rd Stage, 3rd Floor
M.S. Building, Bangalore - 1
Phone : 080-22384574 / 22032941
Fax : 080-22389520
E-mail : Secyrdpr@gmail.com
Secy-rdpr@Karnataka.gov.in

ಅ.ಸ. ಪತ್ರ ಸಂಖ್ಯೆ: ಗ್ರಾಅಪ 15 ಗ್ರಾಪಂಅ 2008 ದಿನಾಂಕ: 16-06-2014

ನೆನಪೋಲೆ

ಮಾನ್ಯರೆ,

ವಿಷಯ: ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ: 2831/2007 ಕ್ಕೆ ಉತ್ತರ ನೀಡುವ ಬಗ್ಗೆ.(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 207,ದಿನಾಂಕ: 13-07-2007 ಶ್ರೀ ವಿ.ಎಸ್.ಉಗ್ರಪ್ಪ)

ಉಲ್ಲೇಖ: 1)ನಿರ್ದೇಶಕರು (ಪಂ.ರಾಜ್) ರವರ ಅರೆ ಸರ್ಕಾರಿ ಪತ್ರ ದಿನಾಂಕ: 07-12-2013, 24-03-2014, 26-04-2014 ಮತ್ತು 30-04-2014.
2)ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ಸರ್ಕಾರಿ ಪತ್ರ ದಿನಾಂಕ: 09-05-2014.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ.

ಉಲ್ಲೇಖಿತ ಅರೆ ಸರ್ಕಾರಿ ಪತ್ರಗಳಲ್ಲಿ ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ: 2831/2007 ಕ್ಕೆ ಉತ್ತರ ನೀಡುವಂತೆ (ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 207, ದಿನಾಂಕ: 13.07.2007 ಶ್ರೀ ವಿ.ಎಸ್.ಉಗ್ರಪ್ಪ) ಕೋರಲಾಗಿತ್ತು. ಸದರಿ ಭರವಸೆಗೆ ತಾವು ಈಗಾಗಲೇ ಉತ್ತರ ನೀಡಿದ್ದರೂ ಸಹ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿರುವಂತೆ ತಮ್ಮ ಜಿಲ್ಲೆಯಲ್ಲಿ ಇರುವ ಹಣದುರುಪಯೋಗದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಪ್ರಕರಣವಾರು ಇತ್ತೀಚಿನ ಮಾಹಿತಿಯನ್ನೊಳಗೊಂಡಂತೆ ಅನುಪಾಲನಾ ವರದಿಯನ್ನು ಪಡೆಯುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸೂಚಿಸಿರುವುದರಿಂದ ದಿನಾಂಕ: 03.05.2014 ರೊಳಗೆ ಹಾರ್ಡ್ ಮತ್ತು ಸಾಫ್ಟ್ ಪ್ರತಿಯೊಂದಿಗೆ (sogp2011@gmail.com) ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿತ್ತು.

ಆದರೆ ಹಾವೇರಿ, ರಾಮನಗರ, ಕೋಲಾರ, ರಾಯಚೂರು ಮತ್ತು ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ಹಾಸನ, ಉಡುಪಿ, ಗದಗ, ಉತ್ತರಕನ್ನಡ, ~~ಬೀದರ್, ಕೊಪ್ಪಳ,~~ ಯಾದಗಿರಿ, ಜಿಲ್ಲೆಗಳು ಇದುವರೆವಿಗೂ ಹಾರ್ಡ್ ಮತ್ತು ಸಾಫ್ಟ್ ಪ್ರತಿಯೊಂದಿಗೆ ಮಾಹಿತಿ ಒದಗಿಸಿರುವುದಿಲ್ಲ.

ಚಿತ್ರದುರ್ಗ, ಮೈಸೂರು, ಮಂಡ್ಯ, ದಕ್ಷಿಣ ಕನ್ನಡ, ಕೊಡಗು, ಚಾಮರಾಜನಗರ, ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗುಲ್ಬರ್ಗಾ, ಬಳ್ಳಾರಿ, ಜಿಲ್ಲೆಗಳು- ಸಾಫ್ಟ್ ಪ್ರತಿಯನ್ನು ಕಳುಹಿಸುವಂತೆ ಕೋರಿದೆ.

ಆದರೆ ಇದುವರೆವಿಗೂ ತಮ್ಮಿಂದ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ವಿಳಂಬಕ್ಕೆ ಅವಕಾಶ ನೀಡದೆ ಜರೂರಾಗಿ ತಮ್ಮ ಜಿಲ್ಲೆಗೆ ಸಂಬಂಧಪಟ್ಟ ಮಾಹಿತಿಯನ್ನು ಕೂಡಲೇ ಕಳುಹಿಸಿಕೊಡಬೇಕಾಗಿತ್ತು. ಆದರೆ ಇದುವರೆವಿಗೂ ತಮ್ಮ ಜಿಲ್ಲೆಯಿಂದ ಮಾಹಿತಿ ಬಂದಿರುವುದಿಲ್ಲ. ಈ ವಿಳಂಬಕ್ಕೆ ಕಾರಣರಾದ ನೌಕರರ ವಿರುದ್ಧ ತಮ್ಮ ಹಂತದಲ್ಲಿ ಶಿಸ್ತಿನ ಕ್ರಮ ತೆಗೆದುಕೊಂಡು ಅಧಿಕಾರಿಗಳ ಹೆಸರುಗಳಿದ್ದಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ಹಾಗೂ ತಮ್ಮ ಹೆಸರನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಲಾಗುವುದು.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
ಜಿಲ್ಲಾ ಪಂಚಾಯತಿಗಳು